ಪ್ರಕಾರದ ಸಾಹಿತ್ಯವನ್ನು ಆಯ್ಕೆ ಮಾಡಿಕೊಂಡಿರಲು ಸಾಧ್ಯವಿಲ್ಲ, ಅಲ್ಲವೇ?

'ತನ್ನ ಕಿರು ಬೆರಳುಗಳಿಂದ ಶುರುಮಾಡಿ ಒಂದೊಂದೇ ಅಂಗವನ್ನು ಅಗೆದು ತಿನ್ನುತ್ತ ಕೊನೆಯಲ್ಲಿ ತನ್ನ ತಲೆಯನ್ನೇ ಆತ ತಿಂದು ತೇಗಿದ' ಎಂದು ಯಾರಾದರೂ ಬರೆದರೆ, 'ಕುಡಿದ ನೀರು ಗಂಟಲಿಗಿಳಿಯುತ್ತಲೇ ಲಾವಾರಸವಾಗಿ ಹರಿದು, ಹೊಟ್ಟೆಯನ್ನು ಪ್ರವೇಶಿಸುತ್ತಲೇ ಸ್ಫೋಟವಾಯಿತು' ಎನ್ನುವ ಸಾಲು ಇನ್ಯಾರದೋ ಹಾಳೆಯಲ್ಲಿ ಮೂಡಿದರೆ, ಅದು ನಿಜ ರೂಪದಲ್ಲಿ ಅಲ್ಲದಿದ್ದರೂ, ಸಾಂಕೇತಿಕವಾಗಿಯಾದರೂ ಕಾರ್ಯಸಾಧ್ಯವಾಗಬಹುದಲ್ಲ? ಬೆಂಕಿಯೊಂದರ ಪ್ರಮಾಣ ಎಷ್ಟೇ ದೊಡ್ಡದಿರಬಹುದು, ಆದರೆ ಪ್ರತಿ ಬೆಂಕಿಯ ಮೂಲವೂ ಸಣ್ಣ ಕಿಡಿಯೇ ಆಗಿರುತ್ತದೆ. ಅಂತೆಯೇ ಕಿಡಿಯೊಂದನ್ನು ನೋಡಿ ಅದರಿಂದುಂಟಾಗಬಹುದಾದ ಜ್ವಾಲೆಯ ಪ್ರಮಾಣ ಊಹಿಸಲೂ ಸಾಧ್ಯವಿಲ್ಲ. ನಮ್ಮ ಕಲ್ಪನೆಗಳೂ ಹಾಗೇ ಅಲ್ಲವೇ?

ಒಟ್ಟಾರೆಯಾಗಿ ಹೇಳುವುದಾದರೆ, ಬರೆದಿರುವುದರ ಮೇಲೆ ನಮಗೊಂದು ವಿಶ್ವಾಸ. 'ಪ್ರತ್ಯಕ್ಷ ನೋಡಿದರೂ ಪ್ರಮಾಣಿಸಿ ನೋಡು' ಎನ್ನುವ ಗಾದೆಯಲ್ಲಿ, ಪ್ರಮಾಣಿಸಿ ನೋಡುವುದರ ಅರ್ಥ ಬಹುತೇಕ ಸಂದರ್ಭಗಳಲ್ಲಿ ಬರೆದು, ಸಹಿ ಹಾಕಿ, ಛಪ್ಪೆಯೊತ್ತಿ ಅಧಿಕೃತಗೊಳಿಸುವುದೇ ಆಗಿದೆ. ಕೋರ್ಟ್ ವಿಚಾರಣೆಯ ನೇರ ಪ್ರಸಾರ ಲಭ್ಯವಿದ್ದರೂ, ಆದೇಶದ ಲಿಖಿತ ಪ್ರತಿ ಕೈಸೇರುವವರೆಗೂ ಯಾರೂ ಏನೂ ಮಾತಾಡುವುದಿಲ್ಲ. ಪ್ರಮಾಣಪತ್ರವಿಲ್ಲದೇ ಜನನ ಮರಣ ಮದುವೆಗಳು ಸಿಂಧುವೆನಿಸುವುದಿಲ್ಲ. ಸರಿಯಾದ ದಾಖಲೆಗಳಿಲ್ಲದ ಸ್ವಂತದ ಜಮೀನಿಗೂ ಬೆಲೆಯಿಲ್ಲ. ಆದಿಮಾನವ ಗುಹೆಯ ಗೋಡೆಯ ಮೇಲೆ ಇದ್ದಿಲಿನಿಂದ ಚಿತ್ರಿಸಿದಂದಿನಿಂದ ಶುರುಗೊಂಡು, ರಾಜ ಮಹಾರಾಜರು ತಮ್ಮ ಯಶೋಗಾಥೆಯನ್ನು ಇತರರ ಮೂಲಕ ಬರೆಸುವುದು, ಶಿಲಾಶಾಸನ ಕೆತ್ತಿಸುವುದು ಇತ್ಯಾದಿಗಳನ್ನೂ ಸೇರಿಸಿ, ಇವತ್ತು 'ಮೆಷಿನ್ ಲಾಂಗ್ವೇಜ್' ಎಂಬುದಾಗಿ ಕರೆಸಿಕೊಂಡು ಕೀಬೋರ್ಡನ್ನು ಕುಟ್ಟಿಸಿಕೊಳ್ಳುವ ಪ್ರತಿ ಬರಹಕ್ಕೂ ಅದರದೇ ಆದ ಮಹತ್ವ ನೀಡಿದ್ದಾನೆ ಮನುಷ್ಯ.

ಹಾಗಾದರೆ ಈ ಅಕ್ಷರಕ್ಕೆ ಅಷ್ಟೊಂದು ಶಕ್ತಿಯಿದೆಯೇ? ಶ್ರೇಷ್ಠ ಸಾಹಿತ್ಯ ಕೃತಿಗಳನ್ನೂ ಒಳಗೊಂಡು ಜಗತ್ತಿನ ಹಲವಾರು ಧರ್ಮಗ್ರಂಥಗಳು, ಪ್ರಮುಖ ನಾಗರಿಕತೆಗಳಲ್ಲಿ ಈ ಪ್ರಶ್ನೆಗೆ ಉತ್ತರ ಸ್ಪಷ್ಟವಾಗಿದೆ.

'ಅಲ್ಕೆಮಿಸ್ಟ್' ಕಾದಂಬರಿಯನ್ನೇ ತೆಗೆದುಕೊಂಡರೆ – ಯಾವುದೇ ಲೋಹವನ್ನು ಚಿನ್ನವಾಗಿಸುವ ರಸವಿದ್ಯೆಯನ್ನು ಬಲ್ಲ ಪರಿಣತನೊಬ್ಬನನ್ನು ಭೇಟಿಯಾಗುತ್ತಾನೆ ನಾಯಕ. ಅದೆಷ್ಟೋ ವರ್ಷಗಳಿಂದ ನೂರಾರು ಬೃಹದ್‌ಗ್ರಂಥಗಳನ್ನು ಓದಿ ತಾನು ಆ ವಿದ್ಯೆಯನ್ನು ಕರಗತ ಮಾಡಿಕೊಂಡಿರುವುದಾಗಿಯೂ, ಅದರ ಅಷ್ಟೂ ಸಾರ ಸಣ್ಣದೊಂದು ಪಚ್ಚೆಕಲ್ಲಿನ ಮೇಲೆ ಒಂದಕ್ಷರದಲ್ಲಿ ಬರೆಯಲಾಗಿದೆ ಎನ್ನುವ ರಹಸ್ಯವನ್ನು ಅರುಹುತ್ತಾನೆ ಆ ಪರಿಣತ. 'ಸಣ್ಣ ಕಲ್ಲಿನ ಮೇಲೆ ಬರೆಯುವಷ್ಟಿದೆ ಎಂದಾದರೆ ಅಷ್ಟೊಂದು ಹೊತ್ತಿಗೆಗಳನ್ನು ಓದುವ ಅವಶ್ಯಕತೆಯಿತ್ತೇ?' ಎನ್ನುವ ನಾಯಕನ ಪ್ರಶ್ನೆಗೆ, 'ಹೌದು. ಆ ಒಂದಕ್ಷರವನ್ನು ಅರ್ಥಮಾಡಿಕೊಳ್ಳಲು ಅದನ್ನೆಲ್ಲಾ ಓದಬೇಕಾಯ್ತು' ಎನ್ನುವ ಉತ್ತರ ಬರುತ್ತದೆ.

'ಅಕ್ಷರಗಳಲ್ಲಿ ನಾನು ಅ–ಕಾರವಾಗಿದ್ದೇನೆ' ಎನ್ನುವ ಶ್ರೀಕೃಷ್ಣನ ನುಡಿಗೂ ಇಂಥದ್ದೇ ಒಂದು ತಾತ್ವಿಕ, ಪಾರಮಾರ್ಥಿಕ ಅರ್ಥವಿರಬಹುದೇ? 'ಅಕ್ಷರಂ ಬ್ರಹ್ಮ ಪರಮಂ, ಸ್ವಭಾವೋಧ್ಯಾತ್ಮ ಮುಚ್ಯತೇ' – ಪರಮಶ್ರೇಷ್ಠವಾಗಿದ್ದು, ನಾಶವಾಗದ (ಅಕ್ಷರ) ಯಾವ ತತ್ವ ಉಂಟೋ ಅದೇ ಬ್ರಹ್ಮ ಎಂಬ ಭಗವದ್ಗೀತೆಯ ಸಾಲಿನಲ್ಲಿ ನಾಶವಾಗದ್ದು ಎನ್ನುವ 'ಅಕ್ಷರ'ವನ್ನು ಬರೆಯುವ ಅಕ್ಷರಕ್ಕೂ ಸಮೀಕರಿಸಿಕೊಳ್ಳಬಹುದಲ್ಲವೇ? ಇನ್ನೂ ಮುಂದುವರಿದು, ಈ ಎಲ್ಲ ಮಾತುಗಳು ಪ್ರಚುರಗೊಂಡದ್ದು, ನಮಗೆ ದಕ್ಕಿದ್ದು ಗಣೇಶ ನವಿಲುಗರಿ (ಅನಂತರ ದಂತ) ಹಿಡಿದು 'ಬರೆದಿದ್ದಾನೆ' ಎನ್ನುವುದರ ಮೂಲಕವೇ ಅನ್ನುತ್ತದೆ ನಮ್ಮ ಪುರಾಣ.

ಅದೇರೀತಿ, ಅಕ್ಷರವನ್ನು ಕಂಡುಹಿಡಿದು ಬರವಣಿಗೆಯನ್ನು ಕಲಿಸಿಕೊಟ್ಟಿದ್ದು 'ಹರ್ಮಸ್'